KAKP030026992023

TRIVENI MAHADEV IRAGAR

Digitally signed by TRIVENI MAHADEV IRAGAR
Date: 2026.04.10 14:44:14 +0530

# ನೇ ಹೆಚ್ಚುವರಿ ಪ್ರಥಮ ದರ್ಜೆ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕೊಪ್ಪಳ.

**ಉಪಸ್ಥಿತರು:**

**ಶ್ರೀಮತಿ. ತ್ರಿವೇಣಿ ಈರಗಾರ,**
**ಬಿ.ಕಾಂ., ಎಲ್.ಎಲ್.ಬಿ.,**
ಹೆ.ಪ್ರ.ದ. **ನ್ಯಾಯಾಧೀಶರು**
**& ಜೆ.ಎಂ.ಎಫ್.ಸಿ., ಕೊಪ್ಪಳ.**

ಇಂದು ದಿನಾಂಕ: **10** ನೇ ಏಪ್ರಿಲ್ **2026**

**ಸಿ.ಸಿ. ನಂ: 1504/2023**
(ಅಪರಾದ ಸಂಖ್ಯೆ:0043/2023)

**ಫಿರ್ಯಾದುದಾರರು :** ಕೊಪ್ಪಳ ಗ್ರಾಮೀಣ ಪೊಲೀಸ ಠಾಣೆ
(ಸರ್ಕಾರಿ ಸಹಾಯಕ ಅಭಿಯೋಜಕರು)

// ವಿರುದ್ಧ //

**ಆರೋಪಿ :** ಬರಮಪ್ಪ ತಂದೆ ಶೇಕಪ್ಪ ಬೂದಿಹಾಳ್
ವಯಃ 30 ವರ್ಷ, ಉಃ ಚಾಲಕ,
**ಸಾ:** ಚಿಕ್ಕ ಸಿಂದೊಗಿ ಗ್ರಾಮ,
ತಾಃ ಮತ್ತು ಜಿ. ಕೊಪ್ಪಳ.

(ಶ್ರೀ ಯು.ಎ.ಎಮ್.ವಕೀಲರು)

| | |
|---|---|
| ಕಛೇರಿಯ ದಿನಾಂಕ | 19-03-2023 |
| ಪ್ರ.ವ.ವರದಿಯ ದಿನಾಂಕ | 23-03-2023 |

| | |
|---|---|
| ಅಂತಿಮ ವರದಿ ದಿನಾಂಕ | 25-04-2023 |
| ದೋಷಾರೋಪಣಾ ತಯಾರಿಸಿದ ದಿನಾಂಕ | 16-06-2025 |
| ಸಾಕ್ಷ್ಯವಿಚಾರಣೆ ಪ್ರಾರಂಭಿಸಿದ ದಿನಾಂಕ | 24-03-2026 |
| ಆದೇಶಕ್ಕೆ ಇಟ್ಟ ದಿನಾಂಕ | 24-03-2026 |
| ತೀರ್ಪು ನೀಡಿದ ದಿನಾಂಕ | 10-04-2026 |
| ದಂಡವಿಧಿಸಿದ ದಿನಾಂಕ ಇದ್ದಲ್ಲಿ | ಇಲ್ಲ |

| ಆರೋಪಿಯ ಪ್ರ.ಸಂ | ಆರೋಪಿಯ ಹೆಸರು | ದಸ್ತಗಿರಿ ಮಾಡಿದ ದಿನಾಂಕ | ಜಾಮೀನಿನ ಮೇಲೆ ಬಿಡುಗಡೆ ಮಾಡಿದ ದಿನಾಂಕ | ದೋಷಾರೋಪಣಾ ಕಲಂಗಳು | ದಂಢಿಸಲಾಯಿತೆ ಅಥವಾ ಬಿಡುಗಡೆಗೊಳಿಸಲಾಯಿತೆ | ದಂಢವಿಧಿಸಿದ ರೀತಿ | ಕಲಂ 428 ರ ಅಡಿಯಲ್ಲಿ ಆರೋಪಿಯನ್ನು ನ್ಯಾಯಾಲಯದ ಬಂಧನದಲ್ಲಿ ವಿಚಾರಣ ಸಮಯದಲ್ಲಿ ಇಧಿಸಿದ ಅವಧಿ |
|---|---|---|---|---|---|---|---|
| 1 | ಬರಮಪ್ಪ | ಇಲ್ಲ | ಇಲ್ಲ | 279 & 304 (ಎ) ಐಪಿಸಿ | ಬಿಡುಗಡೆಗೊಳಿಸಲಾಗಿದೆ | ಇಲ್ಲ | ಇಲ್ಲ |

## **ತೀರ್ಪು**

1. ಸಿಡಬ್ಲ್ಯೂ-13 ಆರಕ್ಷಕ ವೃತ್ತ ನಿರೀಕ್ಷಕರು ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆ ರವರು ಪ್ರಸ್ತುತ ದೋಷಾರೋಪಣೆ ಪಟ್ಟಿಯನ್ನು ಆರೋಪಿ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 279 ಮತ್ತು 304(ಎ)ರ ಐಪಿಸಿ ಅಡಿಯಲ್ಲಿನ ಅಪರಾಧಗಳಿಗಾಗಿ ಸಲ್ಲಿಸಿರುತ್ತಾರೆ.

**2.** ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ: ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವಂತಹ ಚುಕ್ಕನಕಲ್ ಗ್ರಾಮ ಸೀಮಾ ಕೊಪ್ಪಳ-ಮುದ್ದಾಬಳ್ಳಿ ರಸ್ತೆಯಲ್ಲಿ ದಿನಾಂಕ 19-03-2023 ರಂದು ಸಾಯಂಕಾಲ 5.30 ಗಂಟೆಯ ಸುಮಾರಿಗೆ ಆರೋಪಿತನು ತನ್ನ ಹೆಸರಿನಲ್ಲಿರುವ ಆಟೋ ವಾಹನ ನಂ:ಕೆಎ-37/ಬಿ-

5274 ರಲ್ಲಿ ಚಾಸಅ-3, 4 ಮತ್ತು ಮೃತ ರಂಜಿತಾಳನ್ನು ಕುಳ್ಳಿಸಿಕೊಂಡು ಮುದ್ದಾಬಳ್ಳಿ ಕಡೆಯಿಂದ ಚುಕನಕಲ್ ಕಡೆಗೆ ಅತೀವೇಗ ಹಾಗೂ ಅಲಕ್ಷ್ಯತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ವಾಹನ ನಡೆಯಿಸಿಕೊಂಡು ತೆಗ್ಗು ದಿನ್ನೆ ನೋಡದೇ ಚಲಾಯಿಸಿದರಿಂದ ಆಟೋದಲ್ಲಿ ಕೊನೆಗೆ ಕುಳಿತ್ತಿದ್ದ ಮೃತ ರಂಜಿತಾ ಹೂಗಾರ ಇವಳು ಪುಟಿದು ರಸ್ತೆಯ ಮೇಲೆ ಬಿದ್ದಿದ್ದರಿಂದ ತಲೆಗೆ ಭಾರಿ ಪೆಟ್ಟುಬಿದ್ದು ಮೈಕೈಗೆ ಅಲ್ಲಲ್ಲಿ ಪೆಟ್ಟಾಗಿದ್ದರಿಂದ ಕೊಪ್ಪಳದ ಬಿಎಸ್ಆರ್ ಆಸ್ಪತ್ರೆ ಮತ್ತು ಕೊಪ್ಪಳದ ಕೆಎಸ್ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆ ಕುರಿತು ಹುಬ್ಬಳ್ಳಿಯ ಕಿಮ್ಸ್‌ಗೆ ಕರೆದುಕೊಂಡು ಹೋಗಿ ಸೇರಿಕೆ ಮಾಡಿದಾಗ ದಿನಾಂಕ:22-03-2023 ರಂದು ಸಂಜೆ 6.00 ಗಂಟೆಗೆ ಚಿಕಿತ್ಸೆ ಫಲಿಸದೇ ಮೃತಪಟ್ಟಿರುತ್ತಾರೆ ಇರುತ್ತದೆ. ಆ ಪ್ರಕಾರ ಆರೋಪಿ ಐ.ಪಿ.ಸಿ ಕಲಂ ಕಲಂ 279 ಮತ್ತು 304(ಎ) ರ ಐಪಿಸಿ ಅಡಿಯಲ್ಲಿ ಶಿಕ್ಷೆ ಅರ್ಹವಾದ ಅಪರಾದಗಳನ್ನು ಎಸಗಿರುತ್ತಾನೆಂದು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ನ್ಯಾಯಾಲಯವು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿ ಮೇಲ್ನೋಟಕ್ಕೆ ಕಾಣಿಸಿದ ಅಪರಾದಗಳಿಗೆ ಸಂಜ್ಞೆಯತೇಯನ್ನು ತೆಗೆದುಕೊಂಡು ಆರೋಪಿ ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿದ ನಂತರ ಆರೋಪಿ ತಮ್ಮ ವಕೀಲರ ಮುಖಾಂತರ ಜಾಮೀನು ಅರ್ಜಿಯನ್ನು ಗುಜರಾಯಿಸಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿಗೆ ಅಬಿಯೋಗ ಪರ ದಾಖಲಾತಿಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರನ್ವಯ ಒದಗಿಸಲಾಗಿದೆ. ನಂತರ ಆರೋಪಿತನೇ ಮೇಲ್ನೋಟಕ್ಕೆ ಕಾಣಿಸಿ ಕಲಂ ಅನ್ವಯ ಆರೋಪಣೆಯನ್ನು ರಚಿಸಿ ಓದಿ ಹೇಳಲಾಗಿದ್ದು ಆರೋಪಿ ತಾನು ಯಾವುದೇ ತಪ್ಪು ಮಾಡಿರುವುದಿಲ್ಲವೆಂದು ಉತ್ತರಿಸಿ

ವಿಚಾರಣೆಯಾಗಬೇಕೆಂದು ಹಕ್ಕು ಸಾಧನೆ ಮಾಡಿರುತ್ತಾರೆ.

4. ಆರೋಪಿ ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಿರುವಂತಹ ಅಪರಾದಗಳನ್ನು ಮಾಡಿರುತ್ತಾರೆಂದು ಸಾಬೀತು ಪಡಿಸಲು ಅಭಿಯೋಜನೆಯು 16 ಸಾಕ್ಷಿದಾರರ ಪೈಕಿ ಪ್ರಾಸಾ-1 ರಿಂದ 4 ರವರನ್ನು ವಿಚಾರಣೆಯಲ್ಲಿ ವಿಚಾರಣೆಗೆ ಒಳಪಡಿಸಿಕೊಂಡು, 11 ದಾಖಲೆಗಳನ್ನು ನಿಶಾನೆ ಎಂದು ಗುರುತಿಸಿಕೊಂಡಿರುತ್ತಾರೆ. ವಿಚಾರಣೆಗೆ ಒಳಪಡಿಸಿ ಪ್ರಾಸಾ-1 ರಿಂದ 4ನೇ ಸಾಕ್ಷಿದಾರರು ಯಾವುದೇ ವಿಷಯವನ್ನು ಅಭಿಯೋಜಕರ ಹಕ್ಕಿನಲ್ಲಿ ಮುಖ್ಯವಿಚಾರಣೆಯಲ್ಲಿ ಹೇಳಿರುವುದಿಲ್ಲ ಮತ್ತು ಅಭಿಯೋಜಕರ ಪಾಟೀ ಸವಾಲಿನಲ್ಲಿ ಸಹ ಅವರಿಗೆ ಕೇಳಿದ ಪ್ರತಿಕೂಲ ವಿಚಾರಣೆಯಲ್ಲಿ ಸಹ ಸಾಕ್ಷಿದಾರರು ಅಭಿಯೋಜಕರ ಹಿತಾಸಕ್ತಿ ಸಾಕ್ಷಿ ನುಡಿದಿರುವುದಿಲ್ಲ ಆ ಕಾರಣಕ್ಕೆ ಆರೋಪಿ ವಿರುದ್ಧ ಯಾವುದೇ ಸಾಕ್ಷ್ಯದಾರಗಳು ರುಜುವಾತು ಆಗಿರುವುದಿಲ್ಲ ಕಾರಣ ಕಲಂ 313ರ ಅಡಿಯಲ್ಲಿ ವಿಚಾರಣೆಯನ್ನು ರದ್ದುಗೊಳಿಸಿ ಇನ್ನುಳಿದ ಸಾಕ್ಷಿಗಳನ್ನು ಮುಕ್ತಾಯಗೊಳಿಸಿ ಅಂತಿಮ ತೀರ್ಪಿಗೆ ಪ್ರಕರಣವನ್ನು ಕಾಯಿದಿರಿಸಲಾಯಿತು.

5. ಅಭಿಯೋಜನೆಯ ಪರ ಸಾಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಆರೋಪಿ ಪರ ವಕೀಲರ ವಾದ-ಪ್ರತಿವಾದವನ್ನು ಆಲಿಸಿ ಕಡತಗಳನ್ನು ಪರಿಶೀಲನೆ ಮಾಡಲಾಯಿತು.

6. ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿ ಪ್ರಾಜ್ಞ ವಕೀಲರ ವಾದ ವಿವಾದವನ್ನು ಆಲಿಸಿದ್ದೇನೆ. ಕಡತವನ್ನು, ನ್ಯಾಯಾಲಯದ ಮುಂದೆ ಲಭ್ಯವಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಪರಿಶೀಲಿಸಿದ್ದೇನೆ. ನಾನು ಗಮನಿಸಿ ತೀರ್ಮಾನಿಸಲು ಈ

ಕೆಳಗಿನ ಅಂಶಗಳು ಉದ್ಭವಿಸುತ್ತವೆ.

1) ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವಂತಹ ಚುಕ್ಕನಕಲ್ ಗ್ರಾಮ ಸೀಮಾ ಕೊಪ್ಪಳ–ಮುದ್ದಾಬಳ್ಳಿ ರಸ್ತೆಯಲ್ಲಿ ದಿನಾಂಕ 19-03-2023 ರಂದು ಸಾಯಂಕಾಲ 5.30 ಗಂಟೆಯ ಸುಮಾರಿಗೆ ಆರೋಪಿತನು ತನ್ನ ಹೆಸರಿನಲ್ಲಿರುವ ಆಟೋ ವಾಹನ ನಂ:ಕೆಎ-37/ಬಿ-5274 ರಲ್ಲಿ ಚಾಸಅ-3, 4 ಮತ್ತು ಮೃತ ರಂಜಿತಾಳನ್ನು ಕುಳ್ಳಿಸಿಕೊಂಡು ಮುದ್ದಾಬಳ್ಳಿ ಕಡೆಯಿಂದ ಚುಕನಕಲ್ ಕಡೆಗೆ ಅತೀವೇಗ ಹಾಗೂ ಅಲಕ್ಷ್ಯತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ವಾಹನ ನಡೆಯಿಸಿಕೊಂಡು ತೆಗ್ಗು ದಿನ್ನೆ ನೋಡದೇ ಚಲಾಯಿಸಿದರಿಂದ ಆಟೋದಲ್ಲಿ ಕೊನೆಗೆ ಕುಳಿತ್ತಿದ್ದ ಮೃತ ರಂಜಿತಾ ಹೂಗಾರ ಇವಳು ಪುಟಿದು ರಸ್ತೆಯ ಮೇಲೆ ಬಿದ್ದಿದ್ದರಿಂದ ತಲೆಗೆ ಭಾರಿ ಪೆಟ್ಟುಬಿದ್ದು ಮೈಕೈಗೆ ಅಲ್ಲಲ್ಲಿ ಪೆಟ್ಟಾಗಿದ್ದರಿಂದ ಕೊಪ್ಪಳದ ಬಿಎಸ್ಆರ್ ಆಸ್ಪತ್ರೆ ಮತ್ತು ಕೊಪ್ಪಳದ ಕೆಎಸ್ ಆಸ್ಪತ್ರೆಯಿಂದ ಹೆಚ್ಚಿನ ಚಿಕಿತ್ಸೆ ಕುರಿತು ಹುಬ್ಬಳ್ಳಿಯ ಕಿಮ್ಸ್‌ಗೆ ಕರೆದುಕೊಂಡು ಹೋಗಿ ಸೇರಿಕೆ ಮಾಡಿದಾಗ ದಿನಾಂಕ:22-03-2023 ರಂದು ಸಂಜೆ 6.00 ಗಂಟೆಗೆ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದು, ಆ ಪ್ರಕಾರ ಆರೋಪಿ ಐ.ಪಿ.ಸಿ ಕಲಂ 279 ಮತ್ತು 304(ಎ)ರ ಅಡಿಯಲ್ಲಿನ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತಾನೆಂದು ಅಭಿಯೋಜಕರು ರುಜುವಾತುಪಡಿಸಿರುವರೇ?

2) ಏನು ಆದೇಶ?

7. ಮೇಲಿನ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಕಂಡಂತೆ ಇರುತ್ತದೆ.

ಅಂಶ 1 : ನಕಾರಾತ್ಮಕವಾಗಿ,

ಅಂಶ 2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,

**ಕಾರಣಗಳು**

8. ಅಂಶ **1 :** ಪ್ರಾಸಿಕ್ಯೂಷನ್ ವಿಚಾರಣೆ ಮಾಡಿಕೊಂಡ ಸಾಕ್ಷಿಗಳ ಪೈಕಿ ಪಿಡಬ್ಲ್ಯೂ-1 ಫಿರ್ಯಾದಿ. ಪಿಡಬ್ಲ್ಯೂ-2 ಮತ್ತು 3 ರವರು ಪ್ರತ್ಯೇಕ್ಷ ಹಾಗೂ ಪಿಡಬ್ಲ್ಯೂ-4 ಇತರ ಸಾಕ್ಷಿದಾರರಾಗಿರುತ್ತಾರೆ.

9. ಪಿಡಬ್ಲ್ಯೂ-1 ಫಿರ್ಯಾದಿ, ಪಿಡಬ್ಲ್ಯೂ-2 ಮತ್ತು 3 ರವರು ಪ್ರತ್ಯೇಕ್ಷ ಹಾಗೂ ಪಿಡಬ್ಲ್ಯೂ-4 ಇತರ ಸಾಕ್ಷಿದಾರರು, ಪ್ರಾಸಿಕ್ಯೂಷನ್ ಕೇಸಿನ ಸಾರಾಂಶಕ್ಕೆ ಪೂರಕವಾಗಿ ಬೆಂಬಲಿಸಿ ಸಾಕ್ಷಿವಿಚಾರಣೆ ನುಡಿದಿಲ್ಲ. ಬದಲಾಗಿ ಪ್ರತಿಕೂಲ ಸಾಕ್ಷಿಯಾಗಿ ನಿಪಿ-1 ರಿಂದ 7 ರ ಸಂಗತಿಗಳನ್ನು ಕ್ರಮವಾಗಿ ನಿರಾಕರಿಸಿರುತ್ತಾರೆ.

10. ಪ್ರಾಸಿಕ್ಯೂಷನ್ ವಿಚಾರಣೆ ಮಾಡಿಕೊಂಡಿರುವ ಸ್ವತಃ ಫಿರ್ಯಾದುದಾರ ಮತ್ತು ಪ್ರತ್ಯೇಕ್ಷ ಹಾಗೂ ಇತರ ಸಾಕ್ಷಿದಾರರು ಪ್ರಾಸಿಕ್ಯೂಷನ್ ಕೇಸಿನ ಸಾರಾಂಶಕ್ಕೆ ಬೆಂಬಲಿಸಿ ಪೂರಕವಾಗಿ ಸಾಕ್ಷಿ ವಿಚಾರಣೆ ನುಡಿದಿಲ್ಲ, ಎಲ್ಲಾ ಸಾಕ್ಷಿಗಳ ಪ್ರತಿಕೂಲ ಸಾಕ್ಷಿಗಳಾಗಿ ಪ್ರಾಸಿಕ್ಯೂಷನ್ ಕೇಸಿನ ಸಾರಾಂಶವನ್ನು ಸಾಕ್ಷಿಯ ವಿಚಾರಣೆಯಲ್ಲಿ ನಿರಾಕರಿಸಿರುತ್ತಾರೆ. ಮೇಲೆ ಹೇಳಿದ ಎಲ್ಲಾ ಕಾರಣಗಳಿಂದ ಪ್ರಾಸಿಕ್ಯೂಷನ್ ಆರೋಪಿತನ ವಿರುದ್ಧ ಮಾಡಿರುವ ಆರೋಪವನ್ನು ಸಂಶಯರಹಿತವಾಗಿ ಸಾಬಿತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ಅದ್ದರಿಂದ ನಾನು ಅಂಶ ನಂ: **1** ಕ್ಕೆ ನಕಾರಾತ್ಮವಾಗಿ ಉತ್ತರಿಸಿ ಅಂಶ 2 ಕ್ಕೆ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

11. <u>ಅಂಶ **2:**</u> ಮೇಲೆ ಹೇಳಿದ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶ ಮಾಡುತ್ತಿದ್ದೇನೆ.

## <u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ 248 (1)ರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಾ ಆರೋಪಿ ಭಾರತೀಯ ದಂಡ ಸಂಹಿತೆ ಕಲಂ 279 ಮತ್ತು 304(ಎ)ರ ಅಡಿಯಲ್ಲಿನ ಶಿಕ್ಷಾರ್ಹವಾದ ಅಪರಾಧಗಳನ್ನು ಎಸಗಿಲ್ಲವೆಂದು ನಿರ್ಣಯಿಸಿ ಆರೋಪಿಯನ್ನು ನಿರ್ದೋಷಿಯೆಂದು ತೀರ್ಮಾನಿಸಿ ಸದರಿ ಆಪಾದನೆಗಳಿಂದ ಅವರನ್ನು ಬಿಡುಗಡೆ ಮಾಡಲಾಗಿದೆ.

ಆರೋಪಿ ಹಾಗೂ ಆತನ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದುಮಾಡಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರ ಉಕ್ತಲೇಖನ ಕೊಟ್ಟು ಅವರಿಂದ ಬೆರಳಚ್ಚು ಮಾಡಿಸಿದ ನಂತರ ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ದಿ:10 ನೇ ಏಪ್ರಿಲ್-2026 ರಂದು ಆದೇಶವನ್ನು ಘೋಷಿಸಲಾಯಿತು.)

(ಶ್ರೀಮತಿ ತ್ರಿವೇಣಿ ಈರಗಾರ)
**1** ನೇ ಹೆ.ಪ್ರ.ದ ಸಿವಿಲ್ ನ್ಯಾಯಾಧೀಶರು
**&** ಜೆ.ಎಂ.ಎಫ್.ಸಿ., ಕೊಪ್ಪಳ.

<u>ಅನುಬಂಧ</u>

| ಅಭಿಯೋಜಕರ ಸಾಕ್ಷಿ | ವಿಚಾರಣಾ ಸಾಕ್ಷಿ | ಸಾಕ್ಷಿ ಹೆಸರು | ಪದನಾಮ | ಗುರುತಿಸಿದ ದಾಖಲಾತಿಗಳು |
|---|---|---|---|---|
| ಚಾಸಾ.1 | ಪ್ರಾ.ಸಾ.1 | ಫಕೀರಪ್ಪ | ದೂರುದಾರ | ನಿಪಿ–1 :ದೂರು<br>ನಿಪಿ–1(ಎ): ಸಹಿ<br>ನಿಪಿ–2 : ಪಂಚನಾಮೆ<br>ನಿಪಿ–2(ಎ): ಸಹಿ |
| ಚಾಸಾ.3 | ಪ್ರಾ.ಸಾ.2 | ಪ್ರಭುರಾಜ | ಪ್ರತ್ಯಕ್ಷ ಸಾಕ್ಷಿ | ನಿಪಿ–2 : ಪಂಚನಾಮೆ<br>ನಿಪಿ–2(ಬಿ): ಸಹಿ<br>ನಿಪಿ–3,4:ಪೋಟೋಗಳು<br>ನಿಪಿ–5 : ಹೇಳಿಕೆ |
| ಚಾಸಾ.4 | ಪ್ರಾ.ಸಾ.3 | ಹನಮಂತಪ್ಪ | ಪ್ರತ್ಯಕ್ಷ ಸಾಕ್ಷಿ | ನಿಪಿ–6 : ಹೇಳಿಕೆ |
| ಚಾಸಾ.5 | ಪ್ರಾ.ಸಾ.4 | ಮಾರುತಿ | ಇತರ ಸಾಕ್ಷಿ | ನಿಪಿ–1 :ದೂರು<br>ನಿಪಿ–1(ಬಿ): ಸಹಿ<br>ನಿಪಿ–7 : ಹೇಳಿಕೆ |
| | | | | ಆರೋಪಿ ಪರ ವಕೀಲರ ಒಪ್ಪಿಗೆ ಮೇರೆಗೆ ಗುರುತಿಸಿರುವ ದಾಖಲೆಗಳು<br>ನಿಪಿ- -ಪ್ರಥಮ ವರ್ತಮಾನ ವರದಿ<br>ನಿಪಿ–9–ಶವ ಪಂಚನಾಮೆ ವರದಿ<br>ನಿಪಿ–10–ಮರಣೋತ್ತರ ವರದಿ<br>ನಿಪಿ–11–ಐ.ಎಮ್.ವಿ ವರದಿ |

***1.*** <u>ಆರೋಪಿತರ ಪರ ವಿಚಾರಿಸಲಾದ ಸಾಕ್ಷಿಗಳು :</u>

– ಇಲ್ಲಾ –

***2.*** <u>ಆರೋಪಿತರ ಪರ ಗುರುತಿಸಲಾದ ದಾಖಲಾತಿಗಳ ಪಟ್ಟಿ :</u>

– ಇಲ್ಲಾ –

***3.*** <u>ಅಭಿಯೋಜನೆ ಪರ ಗುರುತಿಸಲಾದ ಮುದ್ದೆ ಮಾಲುಗಳ ಪಟ್ಟಿ</u>

- ಇಲ್ಲಾ -

(ಶ್ರೀಮತಿ ತ್ರಿವೇಣಿ ಈರಗಾರ)
1 ನೇ ಹೆ.ಪ್ರ.ದ ಸಿವಿಲ್ ನ್ಯಾಯಾಧೀಶರು
& ಜೆ.ಎಂ.ಎಫ್.ಸಿ., ಕೊಪ್ಪಳ.